

## ಕರ್ನಾಟಕ ನಂಬರ್ 1

ರಾಷ್ಟ್ರದಲ್ಲೇ ಮೊದಲ ಬಾರಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕೃಷಿ ಉತ್ಪನ್ನಗಳನ್ನು ಆನ್‌ಲೈನ್ ವಹಿವಾಟು ನಡೆಸುವ ಏಕೀಕೃತ ಮಾರುಕಟ್ಟೆ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದಿರುವ ಕ್ರಮವನ್ನು ಕೇಂದ್ರ ಸರ್ಕಾರವೂ ಸ್ವಾಗತಿಸಿ, ಅನುಕರಿಸುತ್ತಿರುವುದು ರಾಜ್ಯ ಸರ್ಕಾರದ ಹಿರಿಮೆ.

ಅಲ್ಲದೆ, ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ನವೋದ್ಯಮ ನೀತಿ (ಸ್ಟಾರ್ಟ್ ಅಪ್ ಪಾಲಿಸಿ) ಪ್ರಕಟಿಸಿ, ವಿಶ್ವದ ೨೦ ಮಹಾನಗರಗಳಲ್ಲಿ ಬೆಂಗಳೂರಿಗೂ ಸ್ಥಾನ ದೊರೆತಿದೆ. ಉದ್ಯಾನ ನಗರಿ ಬೆಂಗಳೂರು ಭಾರತದ ನವೋದ್ಯಮಗಳ ರಾಜಧಾನಿ.

ಇಡೀ ಭಾರತದಲ್ಲೇ ಅರಮನೆ ನಗರಿ ಮೈಸೂರು ಎರಡನೇ ಬಾರಿಗೆ ಸ್ವಚ್ಛತಾ ನಗರಿ ಎಂಬ ಗೌರವಕ್ಕೆ ಪಾತ್ರವಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ವೈಜ್ಞಾನಿಕವಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿಯನ್ನು ಮಾಡುವಲ್ಲಿಯೂ ರಾಷ್ಟ್ರದಲ್ಲಿಯೇ ಕರ್ನಾಟಕವೇ ಮೊದಲ ರಾಜ್ಯವಾಗಿದೆ. ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿಯೂ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ.

ಮೆಚ್ಚುಗೆ ವ್ಯಕ್ತಪಡಿಸಿದೆ. ಕ್ಷೀರಭಾಗ್ಯ ಯೋಜನೆಯನ್ನು ಐದು ದಿನಗಳಿಗೆ ವಿಸ್ತರಿಸುವ ಪ್ರಸ್ತಾವನೆ ರಾಜ್ಯ ಸರ್ಕಾರದ ಗಂಭೀರ ಪರಿಶೀಲನೆಯಲ್ಲಿದೆ.

ಕ್ಷೀರಭಾಗ್ಯ ಯೋಜನೆಯ ಅನುಷ್ಠಾನದಿಂದ ಒಂದೆಡೆ ಮಕ್ಕಳಿಗೆ ಕುಡಿಯಲು ಹಾಲು ದೊರೆಯುತ್ತಿದೆ. ಮತ್ತೊಂದೆಡೆ ಅಪೌಷ್ಟಿತೆ ಹಾಗೂ ಪೌಷ್ಟಿಕಾಂಶದ ಕೊರತೆಯಿಂದ ತೀವ್ರವಾಗಿ ಬಳಲುತ್ತಿದ್ದ ಮಕ್ಕಳ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಮಗದೊಂದೆಡೆ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯಲ್ಲಿ ಗಮನಾರ್ಹ ಸುಧಾರಣೆಯಾಗಿದೆ. ಇವೆಲ್ಲದರ ಜೊತೆ ಜೊತೆಗೆ ಹಾಲು ಕೃಷಿಕರಿಗೆ ಅವರ ಉತ್ಪನ್ನಕ್ಕೆ ನ್ಯಾಯಯುತ ಬೆಲೆ ಹಾಗೂ ಉತ್ತಮ ಮಾರುಕಟ್ಟೆ ಲಭಿಸಿದೆ.

## ವಿದ್ಯಾಸಿರಿಯ ಆಸರೆ!

ವಿದ್ಯಾಸಿರಿ ಯೋಜನೆಯನ್ನು ಚಾಲನೆಗೆ ತಂದಾಗ ಕನಿಷ್ಠ ೨೫,೦೦೦ ಫಲಾನುಭವಿಗಳಿಗೆ ಯೋಜನೆಯ ಲಾಭ ತಲುಪಿಸಬೇಕೆಂಬ ಗುರಿ ಹೊಂದಲಾಗಿತ್ತು. ಇದೀಗ ಈ ಯೋಜನೆಯು ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿದೆ. ಮೊದಲು ಕೇವಲ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ರೂಪಿಸಿದ ಈ ಯೋಜನೆಯನ್ನು ನಂತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

ಕಳೆದ ೨೦೧೫೧೬ ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ೮೭,೦೦೦ ವಿದ್ಯಾರ್ಥಿಗಳು ಪ್ರತಿ ತಿಂಗಳಿಗೆ ೧೫೦೦ ರೂ. ನಂತೆ ಹತ್ತುತಿಂಗಳ ಒಂದು ಶೈಕ್ಷಣಿಕ ವರ್ಷದಲ್ಲಿ ೧೫,೦೦೦ ರೂ ಶಿಷ್ಯ ವೇತನ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪಟ್ಟಣ, ನಗರ ಹಾಗೂ ಮಹಾನಗರಗಳಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಲು ಈ ಯೋಜನೆ ಅನುಕೂಲವಾಗಿದೆ. ಪ್ರಸಕ್ತ ವರ್ಷದಲ್ಲಿ ವಸತಿ ಹಾಗೂ ಭೋಜನಕ್ಕೆ ನೆರವು ಒದಗಿಸುವ ಈ ವಿದ್ಯಾಸಿರಿ ಯೋಜನೆಯ ಫಲಾನುಭವಿಗಳ ಸಂಖ್ಯೆ 1 ಲಕ್ಷದ ಗಡಿಯನ್ನೂ ದಾಟಲಿದೆ.

## ಮನಸ್ವಿನಿ- ಮೈತ್ರಿ

ಸಿದ್ದರಾಮಯ್ಯ ಸರ್ಕಾರದ ಹಲವು ಯೋಜನೆಗಳಲ್ಲಿ ಮನಸ್ವಿನಿ ಮತ್ತು ಮೈತ್ರಿ ಕೂಡಾ ಪ್ರಮುಖವಾದವು. ನಲವತ್ತು ವರ್ಷ ದಾಟಿದ ಹೆಣ್ಣು ಮದುವೆಯಾಗದೆ ಮನೆಯಲ್ಲಿಯೇ ಇದ್ದರೆ ಸ್ವತಃ ಆಕೆಯ ತಂದೆ ತಾಯಿ ಕೂಡಾ ತಮ್ಮ ಮಗಳನ್ನೇ ಹೊರೆ ಎಂದು ಭಾವಿಸುತ್ತಾರೆ. ಮದುವೆಯಾಗದೇ ಉಳಿದಿರುವ ಇಂತಹ ಮಹಿಳೆಯರಿಗೆ ಐದು ನೂರು ರೂಪಾಯಿ ಮಾಸಾಶನ ನೀಡುವ ಮಹತ್ವದ ಯೋಜನೆಯನ್ನು ಸಿದ್ದರಾಮಯ್ಯ ಜಾರಿಗೊಳಿಸಿದ್ದಾರೆ. ಅಲ್ಲದೆ, ಈ ಯೋಜನೆಯನ್ನು ವಿಚ್ಛೇದಿತ ಹಾಗೂ ಗಂಡನಿಂದ ಪರಿತ್ಯಕ್ತ ನತದೃಷ್ಟ ಮಹಿಳೆಯರಿಗೂ ವಿಸ್ತರಿಸಲಾಗಿದೆ.

ಸರ್ಕಾರದ ಯೋಜನೆಗಳು ಕೇವಲ ಪುರುಷರು ಹಾಗೂ ಮಹಿಳೆಯರಿಗೆ ಮಾತ್ರವಲ್ಲ, ತೃತೀಯ ಲಿಂಗಿಗಳಿಗೂ ವಿಸ್ತರಿಸುವ ಮಹತ್ವದ ನಿರ್ಧಾರದ ಫಲಶೃತಿಯೇ ಮೈತ್ರಿ ಯೋಜನೆ. ಉದ್ಯೋಗಾವಕಾಶಗಳಿಂದ ವಂಚಿತರಾಗಿ ಸಮಾಜದ ಅವಕೃಪೆಗೆ ಒಳಗಾಗಿರುವ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಒಂದು ಸಾವಿರ ರೂ ಮಾಸಾಶನ ನೀಡುವ ಈ ಯೋಜನೆ ಜಗ ಮೆಚ್ಚುವ ಯೋಜನೆ ಎನಿಸಿದೆ.

## ಕೃಷಿಕರ ಪರ ಸರ್ಕಾರ

ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಬೆಳೆ ಸಾಲ ನೀಡುವ ಯೋಜನೆಯನ್ನು ರೂಪಿಸಿರುವ ಸಹಕಾರಿ ಇಲಾಖೆ ಮೂರು ಲಕ್ಷ ರೂ ವರೆಗೆ

